

ಗಂಟಲಲ್ಲಿ ಅಂಟು–ರಾಳದ ಕುದಿ ಯಾತನೆ. ಎರಡ್ಮೂರು ಸಲ ಕುತ್ತಿಗೆಯನ್ನು ನೀವಿಕೊಂಡಳು ಶಂಕರಿ. ಒಂದೆರಡು ಹನಿ ಕಣ್ಣಿಂದ ಉದುರಿದವಾದರೂ ಒಂದಿಷ್ಟು ಹಳವಾರ ಅನ್ನಿಸಬಹುದಿತ್ತು. ಅದೂ ಆಗಲಿಲ್ಲ. ಗಟಗಟ ನೀರೆತ್ತಿ ಕುಡಿದಳು. ಒಳಗೆ ದುಸುಗುಡುವ ಬೇನೆ, ಒಂದಿಂಕರವೂ ಕಮ್ಮಿಯಾಗಿಲ್ಲ. ಆ ಐದು ವರ್ಷದ ಹಿಂದೆ ಗಂಡನ ಹೆಣ ದವಾಖಾನಿಯಿಂದ ಬೆಡ್‌ಶೀಟ್‌ನಲ್ಲಿ ಸುತ್ತಿ ತಂದು ಇದೇ ಜಗಲಿಯ ಮೇಲೆ ಇಳಿಸಿದಾಗಲೂ ಹೀಗೇ ಆಗಿತ್ತು. ಹಾಗಂತ ಅವನೇನೂ ಇವಳನ್ನು ಬಾಳಿಸಿದ ದೊರೆಯಾಗಿರಲಿಲ್ಲ. ಅವಳಿಗೆ ಕಣ್ಣಿಗೆ ಕಟ್ಟಿದಂತಿದೆ. ನರಗುಂದದ ಆ ಗಂಡನ